ಆರತಿ ಘಟಿಕಾರ್, ದುಬೈ
*ಕೆಲವರು ತಮ್ಮ ವೈಯಕ್ತಿಕ ಜಗಳಗಳನ್ನು ಫೇಸ್‌ಬುಕ್ ಮೇಲೆ ಪ್ರಕಟಿಸುತ್ತಾರಲ್ಲ, ಏಕೆ ರಾಮ್‌ಜೀ?*




ಬೀದಿ ನಲ್ಲಿ ಜಗಳದ ಸಂಸ್ಕೃತಿ! ಫೇಸ್ ಆದರೇನು, ಫೇಸ್‌ಬುಕ್ ಆದರೇನು, ಧೋರಣೆ ಅದೇ!

ಕೆ.ಎನ್.ಗೋಪಾಲಕೃಷ್ಣ, ಕಗ್ಗದಾಸಪುರ
*ಈಗಿನ ಕಾಲದಲ್ಲಿ ಹರಿಶ್ಚಂದ್ರರು ಎಲ್ಲಿದ್ದಾರೆ? ಹುಡುಕಿ ಕೊಡುವಿರಾ?*
ಕನ್ನಡಿ ನೋಡಿ; ಅಲ್ಲೂ ಇಲ್ಲವೆ? ಹಾಗಿದ್ದರೆ ಹುಡುಕಾಟ ವ್ಯರ್ಥ.

ಎಂ.ಎ. ಕುಮಾರ್, ಬೆಂಗಳೂರು
*ರಾತ್ರಿಯ ಸವಿನಿದ್ದೆಯಲ್ಲೇ ಕೆಲವರು ಹೆಚ್ಚು ಮಾತನಾಡುತ್ತಾರೆ. ಏಕೆ?*
ಎಚ್ಚರವಾಗಿರುವಾಗ ಆಡಿದ್ದಕ್ಕಿಂತ ನಿದ್ರೆಯಲ್ಲಿ ಆಡುವ ಮಾತಿಗೇ ಜನ ಹೆಚ್ಚು ಗಮನ ಕೊಡುತ್ತಾರೆಂದು ತಿಳಿದಿರುವುದರಿಂದ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
*ಜೀವನ ಒಂದು ಸಾಗರದಂತೆ ಎನ್ನುತ್ತಾರೆ. ಆಚೆಯ ದಡ ಸೇರುವುದು ಹೇಗೆ ಸರ್?*



ಅಡಿಗರು ಹೇಳಿದಂತೆ 'ಅಳುವ ಕಡಲೊಳು ತೇಲಿ ಬರುತಿದೆ ನಗೆಯ ಹಾಯಿ ದೋಣಿ' ಏರಿಕೊಳ್ಳಿ. ಹ್ಯಾಪಿ ಜರ್ನಿ!

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಇಂದಿನ ದಿನಗಳಲ್ಲಿ ವಿದುರರಿಗಿಂತ ವಿಧವೆಯರು ಹೆಚ್ಚು ಕಾಣಸಿಗುತ್ತಾರೆ. ಏಕೆ?*
ಕಾರಣ ಸುಸ್ಪಷ್ಟ; ಕಾಟ ತಡೆಯಲಾಗದವರು ಮೊದಲು ಟಿಕೆಟ್ ತೆಗೆದುಕೊಳ್ಳುತ್ತಾರೆ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಸಾಯುವುದಕ್ಕೆ ಮುಂಚೆ ಸಾಯುವುದು ಎಂದರೇನು?*
ಪ್ರಾಣ ಹೋಗುವುದಕ್ಕೆ ಮುಂಚೆ ಮಾನ ಹೋಗುವುದು.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ರಾಜಕಾರಣಿಯಾಗಲು ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಇದ್ದಿದ್ದರೆ ಹೇಗಿರುತ್ತಿತ್ತು ರಾಮ್‌ಜಿ?*
ಅಗತ್ಯವಿಲ್ಲ; ಬ್ಯಾಕ್ಟೀರಿಯಾ, ರೇಬೀಸ್ ವೈರಸ್, ಇತ್ಯಾದಿಗಳು ಸ್ವಯಂ ವರ್ಧಿಸಬಲ್ಲವು.

ನವಿರವಿ, ಬಾಳೆಹೊನ್ನೂರು
*ಧಾರಾವಾಹಿಯಲ್ಲಿನ ನೋವಿನ ಪ್ರಸಂಗಕ್ಕೆ ಮರುಗುವವರು ಅದೇ ಪ್ರಸಂಗ ಮನೆಯಲ್ಲಿ ನಡೆದರೆ ಸುಮ್ಮನಿರುತ್ತಾರಲ್ಲಾ?*
ನೋವಿನ ಅರಿವಾಗಬೇಕಾದರೆ ಹಿನ್ನೆಲೆಯಲ್ಲಿ 'ತೋಂತನ ನನನನ; ಧೀಂತನ ತನನನ; ಆಆಆ' ಎಂಬ ಆಲಾಪ ಬರಬೇಕಂತೆ!

ಎಂ.ಕೆ. ರವಿಕಾಂತ, ತುಮಕೂರು
*ಅತೃಪ್ತ ಶಾಸಕರಿಗೂ, ಅತೃಪ್ತ ಪ್ರೇತಕ್ಕೂ ಇರುವ ವ್ಯತ್ಯಾಸವೇನು?*
ಅತೃಪ್ತ ಪ್ರೇತಕ್ಕೆ ಇತರರು ಶ್ರಾದ್ಧ ಮಾಡಬೇಕು; ಅತೃಪ್ತ ಶಾಸಕರು ಇತರರ ಶ್ರಾದ್ಧ ಮಾಡುತ್ತಾರೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಗುಡಿಯಲ್ಲೇಕೆ ಬೆಳಕು ಮತ್ತು ಬಾರ್‌ನಲ್ಲೇಕೆ ಕತ್ತಲು?*
'ಯಾರಾದರೂ ಗುರುತಿಸಲಿ' ಎನ್ನುವೆಡೆ ಬೆಳಕು; 'ಅಯ್ಯೋ! ಗುರುತಿಸಿಬಿಟ್ಟಾರು!' ಎನ್ನುವೆಡೆ ಕತ್ತಲು ಇರುವುದು ಸೂಕ್ತ.

ಪಿ.ಜಯವಂತ ಪೈ, ಕುಂದಾಪುರ
*ಮರದಿಂದ ಮರಕ್ಕೆ ಹಾರುವ ಮಂಗಕ್ಕೂ, ಪಕ್ಷದಿಂದ ಪಕ್ಷಕ್ಕೆ ಹಾರುವ ರಾಜಕಾರಣಿಗೂ ಇರುವ ವ್ಯತ್ಯಾಸವೇನು?*
ನಾಲ್ಕು ಕಾಲಿನ ಕೋತಿ ಮರಗಳನ್ನು ತನ್ನ ಹಿತಕ್ಕಾಗಿ ನಾಶ ಮಾಡುವುದಿಲ್ಲ.

ವಿ. ಹಮೀದ್, ವಿಟ್ಲ
*ಸ್ಟೇಷನ್ ಮಾಸ್ಟರ್, ಸ್ಕೂಲ್ ಮಾಸ್ಟರ್, ಪೋಸ್ಟ್ ಮಾಸ್ಟರ್‌ಗಳಲ್ಲಿ ಯಾರನ್ನು ವರಿಸಲಿ ಎಂದು ಗೆಳತಿ ಕೇಳುತ್ತಿದ್ದಾಳೆ. ಏನೆನ್ನಲಿ?*
ಸ್ಟೇಷನ್ ಮಾಸ್ಟರೇ ವಾಸಿ; ಡಿಲೇ ಸಹಿಸುವುದು ಅಭ್ಯಾಸವಾದವರು ಲೇಡಿಯನ್ನೂ ಸಹಿಸುತ್ತಾರೆ.

## ಬಹುಮಾನಿತ ಪ್ರಶ್ನೆ

ವಿ.ಎಸ್. ಹಿಂದೂಪುರ, ಬಳ್ಳಾರಿ
*ಹುಡುಗರಿಗಿಂತ ಹುಡುಗಿಯರೇ ಹೆಚ್ಚಾಗಿ ಪಾನಿಪೂರಿ ಅಂಗಡಿಗೆ ಮುತ್ತಿರುತ್ತಾರೆ. ಏಕೆ?*
'ಹಾಯ್ ಬ್ಯೂಟಿ' ಎಂದಾಕ್ಷಣ ನಾಚಿ ನೀರಾಗುವ (ಪಾನಿ), ಸಂತಸದಿಂದ ಉಬ್ಬುವ (ಪೂರಿ) ಗುಣ ಇರುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು
*ನ್ಯಾಯದೇವತೆ ಇರುವ ಹಾಗೆಯೇ ರಾಜಕೀಯ ದೇವತೆ ಏಕೆ ಇಲ್ಲ?*
ಇವೆಯಲ್ಲ; ಮಾರಮ್ಮ, ಪ್ಲೇಗಮ್ಮ, ಶಾಕಿನಿ, ಡಾಕಿನಿ, 'ಹಸ್ತಿನಿ'!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಕಾಗದದ ನೋಟಿನೆದುರು ಸತ್ಯ ಮೂಕವಾಗುವುದೇಕೆ?*
ನೋಟಿನಲ್ಲಿ ಗಾಂಧೀಜಿ ಇರುವುದರಿಂದ ಎಲ್ಲ ಒಳಿತೂ ಇದ್ದೇ ಇರುವುದೆಂಬ ಮುಗ್ಧ ನಂಬಿಕೆ!

ಶಿವರಾಜ್ ಕೆ. ವಿಭೂತಿ, ಹರಿಹರ
*ಕುರಿಯನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಮಾಡಿದರೆ ಹೇಗೆ ಗುರುವೆ?*



ಒಳ್ಳೆಯ ಯೋಚನೆ; ನ್ಯಾಷನಲ್ ಮಟನ್ ಸ್ಟಾಲ್ ಎನ್ನುವುದಕ್ಕೆ ಹೊಸ ಅರ್ಥ ಬಂದಂತಾಗುತ್ತದೆ.

ಕೆ.ಯಂ. ವೀರೇಶ, ಕೂಡ್ಲಿಗಿ
*ಕಟ್ಟಿಗೆಯಲ್ಲಿ, ಕಲ್ಲಿನಲ್ಲಿ ದೇವರು ಇರಲಾರನೆಂದು ಅರಿತಿದ್ದರೂ ದೇವಳದ ಕಾರ್ಯ ನಿರಂತರವಾಗಿ ಸಾಗುತ್ತಿದೆಯಲ್ಲಾ?*
ಫೋಟೋದಲ್ಲಿ ಅಗಲಿದ ಹಿರಿಯರು ಇರುವರೇನು? ಭಾವ ಇದ್ದಲ್ಲಿ ದೇವ.

ಗಾಯತ್ರಿ, ಬೆಂಗಳೂರು
*ರಾಮರಾಜ್ಯ ಹೋಗಿ ಭ್ರಷ್ಟಾಚಾರದ ರಾಜ್ಯ ಆಗುತ್ತಿದೆಯಲ್ಲಾ...?*
ನೀವೂ ಸರಿಯೇ! ಅಯೋಗ್ಯರನ್ನು ಚುನಾಯಿಸಿ ಅಯೋಧ್ಯೆ ಕೇಳಿದರೆ ದೊರಕೀತೇ!

ವ.ಉಮೇಶ್ ಕಾರಂತ, ಮಂಗಳೂರು
*ಹಗಲು ಇರುಳನ್ನು ಬೆಸೆದ ಬಾಂಧವ್ಯ ಯಾವುದು?*
ನವ್ಯ–ವನ್ಯತೆಗಳು; ನವ್ಯಕ್ಕೆ ಹಗಲು; ವನ್ಯಕ್ಕೆ ಇರುಳು.

■ ರಾಮ್